<u>1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆ 463/2023

**ಸಾಕ್ಷಿಯನ್ನು ದಿಃ 02.04.2025 ರಂದು ವಿಡಿಯೊ ಕಾನ್ವರೇನ್ಸ್ ಮೂಲಕ ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ರವಿ ಸಿ.ವಿ | ಸಿಡಬ್ಲ್ಯೂ19 | ಪಿಡಬ್ಲ್ಯೂ 8 |
| ತಂದೆಯ ಹೆಸರು | ವೆಂಕಟೇಶ್ | | |
| ವಯಸ್ಸು | 48 ವರ್ಷ | | |
| ಕೆಲಸ | ಡಿ.ವೈ.ಎಸ್.ಪಿ, ಸಿ.ಐ.ಡಿ ಘಟಕ ಬೆಂಗಳೂರು | | |
| ವಾಸಸ್ಥಳ | ಬೆಂಗಳೂರು | | |

**<u>ವಿಡಿಯೊ ಕಾನ್ವರೇನ್ಸ್ ಮೂಲಕ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ದಿಃ 22.06.2022 ರಿಂದ ದಿಃ18.11.2023 ವರೆಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15.01.2023 ರಂದು ಚಾಸಾ 18 ರವರಿಂದ ಈ ಕೇಸಿನ ಕಡತವನ್ನು ಸ್ವೀಕರಿಸಿ ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ಅದೆ ದಿನ ಅಪಘಾತದ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ 1 ರವರು ತೋರಿಸಿದ ಸ್ಥ,ಳದಲ್ಲಿ ಚಾಸಾ 3 ಮತ್ತು 4 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಆ ಕಾಲಕ್ಕೆ ಅಪಘಾತದಲ್ಲಿ ಭಾಗಿಯಾದ ಆಪೆ ಗೂಡ್ಸ್ ನಂಬರ್ ಕೆಎ 45 6776 ಅನ್ನು ವಶಕ್ಕೆ ಪಡೆದಿರುತ್ತೇನೆ. ಈ ಬಗ್ಗೆ ಪೋಟೊ ತೆಗೆದು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಅದೆ ದಿನ ಸ್ಥಳ

ಮಹಜರ್ ಅನ್ನು ಸಂಜೆ 4.30 ರಿಂದ 5.30 ಗಂಟೆ ವರೆಗೆ ಜರುಗಿಸಿರುತ್ತೇನೆ. ನಿಪಿ. 2 ಮತ್ತು 3 ರ ಸ್ಥಳ ಮಹಜರ್ ಮತ್ತು ನಕ್ಷೆಯಲ್ಲಿ ನಲ್ಲಿ ಇರುವ ಸಹಿ ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಗಳನ್ನು ನಿಪಿ. 2(ಡಿ) ಮತ್ತು 3 (ಡಿ) ಎಂದು ಕ್ರಮವಾಗಿ ಗುರುತಿಸಲಾಯಿತು. ಅಮಾನತ್ತು ಪಡಿಸಿಕೊಂಡ ಗೂಡ್ಸ್ ವಾಹನದ ಪೋಟೊಗಳಾದ ನಿಪಿ. 6 ಮತ್ತು 7 ಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಅದೆ ದಿನ ಹುಣಸೂರು ಸರ್ಕಾರಿ ಆಸ್ಪತ್ರೆಗೆ ತೆರಳಿ ಮೃತದ ಶವ ಪಂಚನಾಮೆ ಜರುಗಿಸಿದ್ದು, ಅದನ್ನು ಈಗಾಗಲೆ ಆರೋಪಿ ಪರ ಸಮ್ಮತಿ ಮೇರೆಗೆ ನಿಪಿ.16 ಎಂದು ಗುರುತಿಸಲಾಗಿದೆ. ಅದೆ ದಿನ ಚಾಸಾ 2, 10 ರಿಂದ 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 24.01.2023 ರಂದು ಅಪಘಾತದಲ್ಲಿ ಭಾಗಿಯಾದ ಕೆಎ 45 ಇಸಿ 5786 ಸ್ಕೂಟರ್ ವಾಹನದ ಮಾಲೀಕನಾದ ಆರೋಪಿಗೆ ಐ.ಎಂ.ವಿ ಕಾಯಿದೆ ಕಲಂ 133 ಅಡಿ ನೊಟೀಸು ನೀಡಿ ಉತ್ತರ ಪಡೆದಿರುತ್ತೇನೆ. ಸದರಿ ನೊಟೀಸು ಮತ್ತು ಉತ್ತರವನ್ನು ನಿಪಿ. 19 ಮತ್ತು 20 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 19(ಎ) ಮತ್ತು 20(ಎ) ಎಂದು ಗುರುತಿಸಲಾಯಿತು. ಠಾಣೆಯಲ್ಲಿ ಸ್ಕೂಟರ್ ಅನ್ನು ಹಾಜರು ಪಡಿಸಿದ ಮೇರೆಗೆ ಚಾಸಾ 5 ಮತ್ತು 6 ರವರ ಸಮಕ್ಷಮ ಅಮಾನತ್ತು ಪಂಚನಾಮೆ ಜರುಗಿಸಿರುತ್ತೇನೆ. ಸದರಿ ಅಮಾನತ್ತು ಮಹಜರ್ ಅನ್ನು ಈಗಾಗಲೆ ನಿಪಿ.13 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 13(ಸಿ) ಎಂದು ಗುರುತಿಸಲಾಯಿತು. ಅದೆ ದಿನ ಆರೋಪಿಗೆ ಸಿ.ಆರ್.ಪಿ.ಸಿ 41 ಅಡಿ ನೊಟೀಸು ಜಾರಿ ಮಾಡಿ ವಿಚಾರಣೆ ಕೈಗೊಂಡಿರುತ್ತೇನೆ. ಅದೆ ದಿನ ಚಾಸಾ 1, 2, 10 ರಿಂದ 12 ರವರನ್ನು ಠಾಣೆಗೆ ಬರಮಾಡಿಕೊಂಡು ಆರೋಪಿಯನ್ನು ಗುರುತಿಸಿದ ಬಗ್ಗೆ ಮರು ಹೇಳಿಕೆ ಮಾಡಿಕೊಂಡಿರುತ್ತೇನೆ.

ದಿಃ 24.01.2023 ರಂದು ಚಾಸಾ 1 ರವರ ಗಾಯದ ಪ್ರಮಾಣ ಪತ್ರ ನೀಡುವಂತೆ ಮೃತ ರಫೀಕ್ ಖಾನ್ ರ ಕೇಸ್ ಶೀಟ್ ನೀಡುವಂತೆ ಮನವಿ ಮಾಡಿದ್ದು, ಅದರಂತೆ ಗಾಯದ ಪ್ರಮಾಣ ಪತ್ರ ಮತ್ತು ಕೇಸ್ ಶೀಟ್ ಅನ್ನು ಪಡೆದಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗಾಗಲೆ ನಿಪಿ.17

ಎಂದು ಆರೋಪಿ ಪರ ಸಮ್ಮತಿ ಮೇರೆಗೆ ಗುರುತಿಸಲಾಗಿದೆ.  ಸೀಜ್ ಮಾಡಿದ ಸ್ಕೂಟರ್ ನ ನಿಪಿ. 4 ಮತ್ತು 5 ರ ಪೋಟೊ ನೋಡಿ ಗುರುತಿಸಿರುತ್ತಾರೆ. ದಿಃ 31.01.2023 ರಂದು  ಆರ್.ಟಿ.ಓ ರವರಿಗೆ ಅಪಘಾತಕ್ಕೆ ಈಡಾದ ಆಟೊ ಮತ್ತು ಸ್ಕೂಟರ್ ನ ಐ.ಎಂ.ವಿ ವರದಿ ಕೊಡುವಂತೆ ನಿವೇದಿಸಿಕೊಂಡಿರುತ್ತೇನೆ. ಸದರಿ ರವರು ಪರಿಶೀಲಿಸಿ ವರದಿ  ನೀಡಿದ್ದು, ಸದರಿ ವರದಿಯನ್ನು ಈಗಾಗಲೆ ನಿಪಿ. 16 ಎಂದು ಆರೋಪಿ ಪರ ಸಮ್ಮತಿ ಮೇರೆಗೆ ಗುರುತಿಸಲಾಗಿದೆ. ಅದೆ ದಿನ  ಆಟೋ ರಿಕ್ಷಾ ಅನ್ನು ಚಾಸಾ 14 ರವರಿಂದ ಇಂಡಿಮಿನಿಟಿ ಬಾಂಡ್ ಪಡೆದು ಚಾಸಾ 11 ರವರಿಗೆ ಬಿಡುಗಡೆ ಗೊಳಿಸಿರುತ್ತೇನೆ. ಸದರಿ ಬಾಂಡ್ ಅನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ. 21 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 21(ಎ) ಎಂದು ಗುರುತಿಸಲಾಯಿತು.

ಅದೆ ದಿನ ಚಾಸಾ 14 ರವರಿಂದ  65 ಬಿ ಪ್ರಮಾಣ ಪತ್ರ  ಪಡೆದಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ. 22 ಎಂದು,  ಸಾಕ್ಷಿಯ ಸಹಿಯನ್ನು ನಿಪಿ. 22(ಎ) ಎಂದು ಗುರುತಿಸಲಾಯಿತು. ಅದೆ ದಿನ  ಆರೋಪಿಯಿಂದ ಇಂಡಿಮಿನಿಟಿ ಬಾಂಡ್ ಪಡೆದು ಸ್ಕೂಟರ್ ಅನ್ನು ಆತನ ವಶಕ್ಕೆ  ಕೊಟ್ಟಿರುತ್ತೇನೆ. ಸದರಿ ಇಂಡಿಮಿನಿಟಿ  ಬಾಂಡ್ ಅನ್ನು ನಿಪಿ. 23 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 23(ಎ) ಎಂದು ಗುರುತಿಸಲಾಯಿತು. ದಿಃ 20.06.2023 ರಂದು ಚಾಸಾ 16 ರವರಿಂದ ಮೃತನ ಪಿ.ಎಂ. ವರದಿ ಸ್ವೀಕರಿಸಿರುತ್ತೇನೆ. ಅದನ್ನು ಈಗಾಗಲೆ ನಿಪಿ. 15 ಎಂದು ಆರೋಪಿ ಪರ ಸಮ್ಮತಿ ಮೇರೆಗೆ ಗುರುತಿಸಲಾಗಿದೆ. ಅದೆ ದಿನ ಆರೋಪಿಯ ಮೇಲೆ ಆರೋಪ ಸಾಬೀತಾದ ಕಾರಣ ಆರೋಪಿಯ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆತನನ್ನು ಗುರುತಿಸಲು ತಕರಾರು ಇಲ್ಲ ಎಂದು ಅರ್ಜಿ ಸಲ್ಲಿಸಿರುತ್ತಾರೆ.

**ವಿಡಿಯೊ ಕಾನ್ಪರೇನ್ಸ್ ಮೂಲಕ ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ.ಎ.ಎನ್ ವಕೀಲರಿಂದಃ**

ನಾನು ಸ್ವತಃ ಯಾವುದೇ ತನಿಖೆ ಕೈಗೊಂಡಿಲ್ಲ, ಸಿಬ್ಬಂದಿಗಳು ತಯಾರಿಸಿದ ದಾಖಲೆಗಳಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೆ ಸಾಕ್ಷಿದಾರರ ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೆ ಸ್ಥಳಕ್ಕೆ ಭೇಟಿ ನೀಡಿಲ್ಲ, ಅಲ್ಲಿ ಯಾವುದೆ ಮಹಜರ್ ಕ್ರಮ ಜರುಗಿಸಿಲ್ಲ, ಫೋಟೊ ಆಗಲಿ, ನಕ್ಷೆ ಆಗಲಿ ತಗೆದಿಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡುವ ಪೂರ್ವದಲ್ಲಿ ಸಾಕ್ಷಿಗಳಿಗೆ ಯಾವುದೆ ನೊಟೀಸು ಕೊಟ್ಟಿಲ್ಲ, ಅಲ್ಲದೆ ಹೇಳಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಸಾಕ್ಷಿದಾರರಗೆ ನೊಟೀಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದೂರುದಾರರು ಕರೆದುಕೊಂಡು ಬಂದ ಸಾಕ್ಷಿದಾರರನ್ನು ಈ ಪ್ರಕರಣದ ಸಾಕ್ಷಿ ಪಟ್ಟಿಯಲ್ಲಿ ಸೇರಿಸಿದ್ದೇವೆ ಹೊರತು ಸ್ವತಂತ್ರ ಸಾಕ್ಷಿದಾರರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ.

ಅಪಘಾತದ ಸ್ಥಳ ವೀರನಹೊಸಹಳ್ಳಿ ಕಡೆಯಿಂದ ಹುಣಸೂರು ಕಡೆಯಿಂದ ಬರುವ ರಸ್ತೆ ಎಸ್ ಆಕಾರಣದಲ್ಲಿ ಇದೆ ಎಂದರೆ ಸರಿ. ಅಪಘಾತ ಆಯಿತು ಎಂದು ಹೇಳಲಾದ ಗೂಡ್ಸ್ ಆಟೋ 3 ಚಕ್ರದ್ದು ಎಂದರೆ ಸರಿ. ಸಾಮಾನ್ಯವಾಗಿ ತಿರುವು ಇರುವ ರಸ್ತೆಯಲ್ಲಿ ಆಟೋಗಳು ವೇಗವಾಗಿ ಬಂದರೆ ಆಟೋ ಪಲ್ಟಿ ಆಗುವ ಸಾಧ್ಯತೆ ಇರುತ್ತದೆ ಎಂದರೆ ಇರಬಹುದು. ಈ ಪ್ರಕರಣದಲ್ಲಿಯೂ ಕೂಡ ಆಟೊ ಅತಿವೇಗವಾಗಿ ತಿರುವು ರಸ್ತೆಯಲ್ಲಿ ಬಂದಿರುವ ಕಾರಣ ಸಡನ್ನಾಗಿ ಪಲ್ಟಿ ಆಗಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಕ್ಷೆಯಲ್ಲಿ ರಸ್ತೆಯ ಅಗಲ, ಉದ್ದವನ್ನು ಸರಿಯಾಗಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಹಿಗಳನ್ನು ಠಾಣೆಯಲ್ಲಿ ಪಡೆದುಕೊಂಡಿಲ್ಲ, ಅವರನ್ನು ಸ್ಥಳಕ್ಕೆ ಕರೆಸಿಲ್ಲ, ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 3 ರವರು ನಗರ ಸಭೆ ಸದಸ್ಯರು ಇದ್ದು, ಅವರು ಠಾಣೆಗೆ ಆಗಾಗ್ಗೆ ಬರುತ್ತಿದ್ದ ಅವರ ಸಹಿಯನ್ನು ಠಾಣೆಯಲ್ಲಿಯೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾಹನಗಳನ್ನು ನಾನು ವಶಕ್ಕೆ

ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೆ ಸಾಕ್ಷಿದಾರರ ಹೇಳಿಕೆ ಆಗಲಿ ಮರು ಹೇಳಿಕೆ ಆಗಲಿ ಪಡೆದಿಲ್ಲ ಎಂದರೆ ಸರಿಯಲ್ಲ. ಪೋಟೊಗಳನ್ನು ಘಟನಾ ಸ್ಥಳದಲ್ಲಿ ತೆಗೆದಿಲ್ಲ ಅವುಗಳನ್ನು ಅನುಕೂಲಕ್ಕೆ ತಕ್ಕಂತೆ ಠಾಣೆಯಲ್ಲಿಯೆ ತೆಗೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿ, ದೂರುದಾರ ಮತ್ತು ಆರೋಪಿ ಮೂರು ಜನರು ಒಂದೇ ಊರಿನವರು ಆದರೂ ದೂರನ್ನು ಅನಾಮದೇಯ ವ್ಯಕ್ತಿಯ ಮೇಲೆ ಕೊಟ್ಟಿರುತ್ತಾರೆ ಎಂದರೆ ದೂರನ್ನು ಹಾಗೆಯೇ ನೀಡಿರುತ್ತಾರೆ. ಆರೋಪಿ ತಪ್ಪಿನಿಂದ ಯಾವುದೆ ಅಪಘಾತ ಆಗಿಲ್ಲ ಎಂದು ಕಂಡು ಬಂದಿದ್ದರೂ ಕೂಡ ಮೃತನ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ಸುಳ್ಳು ತನಿಖೆ ಕೈಗೊಂಡು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**ಡಿ.ವೈ.ಎಸ್.ಪಿ, ಸಿ.ಐ.ಡಿ ಘಟಕ ಬೆಂಗಳೂರು ರವರು ವಿಡಿಯೊ ಕಾನ್ಫರೇನ್ಸ್ ಮೂಲಕ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ, ಆದ ಕಾರಣ ಸಹಿಯನ್ನು ಪಡೆದುಕೊಂಡಿರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.